ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,
ಹಗರಿಬೊಮ್ಮನಹಳ್ಳಿ

ಸಿ ಸಿ ನಂ. 1415/2024

ಸಾಕ್ಷಿಗೆ ದಿನಾಂಕ 17-01-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1 P.W.: 1

| | | |
|---|---|---|
| ಹೆಸರು | : | ಮಮತಾ ಎಸ ಬಿ |
| ಗಂಡನ ಹೆಸರು | : | ಧನರಾಜ್ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು ಹೆಚ್ ಬಿ ಹಳ್ಳಿ ವಲಯ |
| ವಾಸ ಸ್ಥಳ | : | ಹೆಚ್ ಬಿ ಹಳ್ಳಿ |

ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-

ದಿಃ 27-06-2019 ರಿಂದ 22-12-2023 ರವರೆಗೆ ಹೆಚ್ ಬಿ ಹಳ್ಳಿ ಅಬಕಾರಿ ವಲಯದಲ್ಲಿ ಅಬಕಾರಿ ಉಪನಿರೀಕ್ಷರು ಅಂತಾ ಕರ್ತವ್ಯ ನಿರ್ವಹಿಸಿರುತ್ತೇನೆ. ಈಗ ಅಬಕಾರಿ ನಿರೀಕ್ಷಕರು ಅಂತಾ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿನಾಂಕ 20.09.2023 ರಂದು ಗಣೇಶ ಹಬ್ಬದ ಪ್ರಯುಕ್ತ ಮದ್ಯ ಮಾರಾಟದ ನಿಶೇದ ಆಜ್ಞೆ ಜಾರಿಯಲ್ಲಿದ್ದರಿಂದ ನಾನು ಹಾಗೂ ಚಾಸ 4 ಮತ್ತು 5 ರವರು ಹೆಚ್ ಬಿ ಹಳ್ಳಿ ಯಲ್ಲಿ ಗಸ್ತಿನಲ್ಲಿದ್ದಾಗ ಸಂಜೆ 6.20. ಗಂಟೆ ಸಮಯದಲ್ಲಿ ವಾಲ್ಮೀಕಿ ಸರ್ಕಲ್ ಅಲ್ಲಿರುವ ಒಂದು ಸಾವಾಜಿ ಮಾಂಸಹಾರಿ ಹೋಟೆಲ್ ನಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾರೆ ಅಂತಾ ಮಾಹಿತಿ ಬಂದಿರುತ್ತದೆ ಸದರಿ ಮಾಹಿತಿಯನ್ನು ನಾನು ಚಾಸಾ 4 ಮತ್ತು 5 ರವರಿಗೆ ತಿಳಿಸಿ ಪಂಚರನ್ನು ಕರೆತರಲು ಚಾಸ 4 ರವರಿಗೆ ಸೂಚಿಸಿದ್ದು ಹಾಗ ಅವರು ಚಾಸಾ 2 ಮತ್ತು 3 ಪಂಚರನ್ನು ಕರೆತಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಮಾಹಿತಿ ವಿಚಾರವನ್ನು ಪಂಚರಿಗೆ ಹೇಳೀ ಅವರಿಗೆ ಪಂಚನಾಮೆಗೆ ಸಹಕರಿಸಲು ಕೋರಿಕೊಂಡಿದ್ದು ಅದಕ್ಕೆ ಅವರು ಒಪ್ಪಿರುತ್ತಾರೆ. ನಾನು ನಮ್ಮ ಸಿಬ್ಬಂದಿ ಮತ್ತು ಪಂಚರು ಸೇರಿ ನಮ್ಮ ಇಲಾಖಾ ವಾಹನದಲ್ಲಿ ಮಾಹಿತಿ ಬಂದ ಸ್ಥಳಕ್ಕೆ ಸುಮಾರು 6.30-6.45 ಸಮಯದ ಒಳಗೆ ಹೋಗಿರುತ್ತೇವೆ. ಅಲ್ಲಿ ಹೋದ ನಂತರ ಅಲ್ಲಿ ಒಬ್ಬ ವ್ಯಕ್ತಿ ನಮ್ಮ ವಾಹನವನ್ನು ನೋಡಿ ಓಡಿ ಹೋಗಿರುತ್ತಾನೆ. ನಮ್ಮ ಸಿಬ್ಬಂದಿಗಳು ಅವರನ್ನು ಹಿಡಿಯಲು ಪ್ರಯತ್ನಿಸಿರುತ್ತಾರೆ ಅದರೆ ಅವರು ಸಿಕ್ಕಿರುವುದಿಲ್ಲ. ಸ್ಥಳದಲ್ಲಿ ಸರ್ಚ ವಾರಂಟನ್ನು ತಯಾರಿಸಿರುತ್ತೇವೆ ಮತ್ತು ಸದರಿ ಹೋಟೆಲ್ ಒಳಗಡೆ ಪ್ರವೇಶಿಸಿ ನೋಡಲಾಗಿ ಆ ಹೋಟೆಲನ ಒಂದು ಕೋಣೆಯ ಒಳಗೆ 2 ತೆರೆದ ರಟ್ಟಿನ ಪೆಟ್ಟಿಗೆಗಳು ಇದ್ದವು ಅದರಲ್ಲಿ ಮದ್ಯದ ಟೆಟ್ರಾ

ಪ್ಯಾಕೇಟ್ ಮತ್ತು ಬಾಟಲ್ ಗಳು ಇರುವುದು ಮೇಲ್ನೋಟಕ್ಕೆ ಕಾಣುತ್ತಿದ್ದವು. ಅವುಗಳನ್ನು ಪರಿಶೀಲಿಸಿ ನೋಡಲಾಗಿ ಬಿಪಿ ಕಂಪನಿಯ 180 ಮೀಲಿಯ ವಿಸ್ಕಿಯ ಟೆಟ್ರಾ ಪೌಚ್ಗಳು ಮತ್ತು 180 ಮಿಲಿಯ 8 ಪಿ ಎಂ ವಿಸ್ಕಿಯ 2 ಟೆಟ್ರಾ ಪ್ಯಾಕೆಟ್ , ಓ ಎಂ ಆರ್ ರಂ ಹೆಸರಿನ 3 ಮದ್ಯದ ಟೆಟ್ರಾ ಪ್ಯಾಕೆಟ್ ಗಳು, 180 ಎಂ ಎಲ್ ನ ಎಂ  ಸಿ ನಂ 1 ಕಂಪನಿಯ 1 ಟೆಟ್ರಾ ಪೌಚ್ ಹಾಗೂ 650 ಮಿಲಿಯ ಕಿಂಗ್ ಫಿಶರ ಸ್ಟ್ರಾಂಗ್ ನಂ 5  ಬಾಟಲಿಗಳು, 650 ಮಿಲಿಯ ಕಿಂಗ್ ಫಿಶರ ಸ್ಟ್ರಾಂಗ್ ಪ್ರಿಮಿಯಂ ನಂ 2 ಬಿಯರ  ಬಾಟಲಿಗಳು ಇದ್ದವು. ಅವುಗಳನ್ನು ಪಂಚರ ಸಮ್ಮುಖದಲ್ಲಿ ನಾನು ಅಮಾನತು ಪಡಿಸಿಕೊಂಡಿರುತ್ತೇನೆ. ಅವುಗಳಲ್ಲಿ ಬಿಪಿಯ ಕಂಪನಿಯ 7 ಟೆಟ್ರಾ ಪೌಚ್, 8 ಪಿಎಂ ನ 2 ಟೆಟ್ರಾ ಪೌಚ್, ಎಂ ಸಿ ನಂ 1 ನ ಟೆಟ್ರಾ ಪೌಚ್ ಹಾಗೂ  7 ಬಿಯರ್ ಬಾಟಲಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಳ್ಳಲಾಯಿತು. ಸ್ಥಳದಲ್ಲಿ ಆ ದಿನ ಪಂಚನಾಮೆಯನ್ನು ಸಂಜೆ 7.30 ರಿಂದ 8.30 ವರೆಗೆ ಜರುಗಿಸಲಾಯಿತು. ಪಂಚನಾಮೆಗೆ ಪಂಚರು ಮತ್ತು ನಮ್ಮ ಸಿಬ್ಬಂದಿಗಳ ಸಹಿಯನ್ನು ಪಡೆದಿದ್ದೇನೆ. ಮಾದರಿ ಸೀಲು ನಮೂನೆಯಲ್ಲಿ ಪಂಚರ ಸಹಿ ಪಡೆದಿರುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಮಾದರಿ ಸೀಲು ನಮೂನೆಯನ್ನು ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ 1 ಎಂದು ಮಾದರಿ ಸೀಲು ನಮೂನೆಯನ್ನು ನಿಪಿ 2 ಎಂದು ನಿಪಿ 1 ಮತ್ತು 2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1 ಎ ಮತ್ತು 2 ಎ ಅಂತಾ ಗುರುತಿಸಲಾಯಿತು. ಅಮಾನತುಪಡಿಸಿಕೊಂಡ ಮುಮಾ ಪಂಚನಾಮೆಯೊಂದಿಗೆ ಠಾಣೆಗೆ ಹಾಜರಾಗಿ ಸರಕಾರದ ಪರವಾಗಿ ದೂರು ದಾಖಲಿಸಿದ್ದೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 3 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 3 ಎ ಎಂದು ಗುರುಅತಿಸಲಾಯಿತು. ಸರ್ಚ ವಾರಂಟನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಪ್ರ ವ ರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 5 ಎ ಎಂದು ಗುರುತಿಸಲಾಯಿತು. ಪ್ರ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾದಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸಿಕ್ಕಿರುವ ಮಮಾಲಿನ ಬಗ್ಗೆ ಸ್ವತ್ತು ಪಟ್ಟಿಯನ್ನು ತಯಾರಿಸಿ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ಸದರಿ    ಸ್ವತ್ತು ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿಂದ್ದು ಅದನ್ನು ನಿಪಿ 6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಆ ದಿನ ಅಮಾನತುಪಡಿಸಿಕೂಂಡ ಮುಮಾಲುಗಳಲ್ಲಿ ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡ 13 ಟೆಟ್ರಾ ಪ್ಯಾಕೆಟ ಮತ್ತು 7 ಬಿಯರ್ ಬಾಟಲಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮುಮಾ 1 ಎಂದು ಗುರುತಿಸಲಾಯಿತು. ಆ ದಿನ ಓಡಿ ಹೋದ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಆ

ದಿನ ಓಡಿ ಹೋದ ವ್ಯಕ್ತಿ ಆಗಿರುತ್ತಾನೆ. ದಿನಾಂಕ 27.10.2023 ರಂದು ಈ ಪ್ರಕರಣದ ಕಡತವನ್ನು ಚಾಸಾ 7 ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀ ಸವಾಲು. ಆರೋಪಿ ಪರ ಎಸ್ ಎಲ್ ಜಿ ವಕೀಲರಿಂದಃ-

ಆ ದಿನ ಮದ್ಯಾಹ್ನ 4-4.30 ಗಂಟೆ ಸಮಯದಲ್ಲಿ ನಾವು ಕಚೇರಿಯಿಂದ ಹೊರಟು ಹೆಚ್ ಬಿ ಹಳ್ಳಿ ಯಲ್ಲಿ ಗಸ್ತು ಕಾರ್ಯದಲ್ಲಿದ್ದೆವು. ನನಗೆ ಮಾಹಿತಿ ಬಂದಾಗ ನಾನು ಹಳೆ ಹೆಚ್ ಬಿ ಹಳ್ಳಿ ಯ ಸೊನ್ನ ಮೊರಗೇರೆ ಕ್ರಾಸ್ ಬಳಿ ಇದ್ದೆ. ನಾನು ಅಲ್ಲಿಂದ ರಾಮನಗರ ಬಸ್ ನಿಲ್ದಾಣ ಬಳಿ ಬಂದು 2 ಜನ ಪಂಚರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಸೊನ್ನ ಮೊರಗೇರಿ ಕ್ರಾಸ ಬಿಟ್ಟಾಗ ಸಮಯ ಸಂಜೆ 6.15 ರಿಂದ 6.20 ಗಂಟೆ ಆಗಿತ್ತು. ರಾಮನಗರ ಬಸ್ ನಿಲ್ದಾಣದ ಬಳಿ ಬಂದಾಗ ಸಮಯ 6.25 ಆಗಿತ್ತು. ಅಲ್ಲಿಂದ ನಾನು ನೇರವಾಗಿ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ರಾಮನಗರದಿಂದ ನಾನು 6.30 ರಿಂದ 6.35 ಗಂಟೆಯವರೆಗೆ ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಘಟನಾ ಸ್ಥಳಕ್ಕೆ ತಲುಪಿದಾಗ ಸಮಯ 6.40 ಗಂಟೆ ಆಗಿರುತ್ತದೆ. ಸದರಿ ಹೋಟೆಲನ ಹೆಸರು ಜೈ ಭವಾನಿ ಮಾಂಸಹಾರಿ ಸವಾಜಿ ಹೋಟೆಲ್ ಅಂತಾ ಇತ್ತು. ಓಡಿ ಹೋದಾಗ ವ್ಯಕ್ತಿ ಯಾರು ಅಂತಾ ನನಗೆ ಗೊತ್ತಿರಲಿಲ್ಲ. ಆ ಹೋಟೆಲ್ ಮಾಂಸಾ ಹಾರಿ ಆಹಾರ ವನ್ನು ಪೂರೈಸುವ ಹೋಟೆಲ್ ಆಗಿರುತ್ತದೆ ಎಂದರೆ ಸರಿ. ನಾವು ಆದಿನ ದಾಳಿ ಮಾಡಿರುತ್ತೇವೆ, ಆ ಹೋಟೇಲನಿಂದ ಮುಮಾ 1 ಅನ್ನು ಅಮಾನತುಪಡಿಸಿಕೊಂಡಿರುತ್ತೆವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 4 ರವರ ಮೂಲಕ ಪಂಚರನ್ನು ಬರಮಾಡಿಕೊಂಡಿರುತ್ತೇನೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಮಾ 1 ರಂತಹ ಮದ್ಯದ ಟೆಟ್ರಾ ಪೌಚು ಮತ್ತು ಬಾಟಲಿಗಳು ಮದ್ಯದ ಅಂಗಡಿಯಲ್ಲಿ ಸಿಗುತ್ತದೆ ಎಂದರೆ ಸರಿ. ಸದರಿ ಮುಮಾಲುಗಳ ಬ್ಯಾಚ್ ನಂ ಉತ್ಪಾದನಾ ದಿನಾಂಕ ನನಗೆ ಹೆಳಲು ಬರುವುದಿಲ್ಲ. ಆ ದಿನ ನಾನು ನನ್ನ ಸಿಬ್ಬಂದಿ ಮತ್ತು ಪಂಚರೊಂದಿಗೆ ಮೇಲೆ ಹೇಳಿದ ಹೋಟೆಲ್ ಮೇಲೆ ದಾಳಿ ಮಾಡಿ ಹೋಟೆಲ್ ನಿಂದ ಪಂಚರ ಸಮ್ಮುಖದಲ್ಲಿ ಪಂಚನಾಮೆಯ ಮೂಲಕ ಮುಮಾ ಮದ್ಯವನ್ನು ಅಮಾನತುಪಡಿಸಿಕೊಂಡಿರುತ್ತೇನೆ ಮತ್ತು ಅದರಿಂದ ರಸಾಯನಿಕ ಪರೀಕ್ಷೆಗಾಗಿ ಮುಮಾ 1 ಅನ್ನು ತೆಗೆದುಕೊಂಡಿರುತ್ತೇನೆ ಹಾಗೂ ಸ್ಥಳದಲ್ಲಿ ನಿಪಿ 1 ರಂತೆ ಪಂಚನಾಮೆಯನ್ನು ಜರುಗಿಸಿರುತ್ತೇನೆ, ನಿಪಿ 2 ರಂತೆ ಮಾದರಿ ಸೀಲ್ ನಮೂನೆಯನ್ನು ತಯಾರಿಸಿರುತ್ತೆನೆ ಮತ್ತು ನಿಪಿ 4 ರಂತೆ ಸರ್ಚ ವಾರಂಟ ತಯಾರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಸದರಿ ಮುಮಾಲಿಗೂ ಯಾವುದೇ ಸಂಬಂದವಿಲ್ಲ ಆರೂಪಿ ಯಾವುದೇ ತಪ್ಪನ್ನು ಮಾಡಿಲ್ಲ ನಮ್ಮ ಠಾಣೆ ಅಂಕೆ ಸಂಖ್ಯೆಗಾಗಿ ನಿಪಿ 3 ಮತ್ತು 4 ರಂತೆ ಸುಳ್ಳು ದೂರು ಮತ್ತು ಸುಳ್ಳು ಪ್ರವರದಿಯನ್ನು

ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತನು ನಾನು ಹೇಳುವ ಹಾಗೆ ಯಾವುದೇ ಅಪರಾದ ಮಾಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ